# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ  E-mail : kannadapostnews@gmail.com  / ಕನ್ನಡ post  Price: ₹1

Vol.No.02 | Issue. 143 | Pages. 2 | Date: 12-05-2026, TUESDAY  RNI NO: KARKAN/2024/89601  Kannada Daily

ಸಂಪುಟ : 02 - ಸಂಚಿಕೆ : 143 - ಪುಟಗಳು : 2  12-05-2026  ಮಂಗಳವಾರ  Ph: 8762954248  ದರ : ₹1


# ಅಪರೂಪದ ಶಸ್ತ್ರಚಿಕಿತ್ಸೆ ಯಶಸ್ವಿ

## ಜನಪ್ರಿಯ ಆಸ್ಪತ್ರೆ ಮತ್ತೊಂದು ದಾಖಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಪಘಾತದಲ್ಲಿ ಗಂಭೀರ ಗಾಯಗೊಂಡು ಸಾಯುವ ಹಂತ ತಲುಪಿದ್ದ ಯುವಕನಿಗೆ ನಗರದ ಜನಪ್ರಿಯ ಆಸ್ಪತ್ರೆಯವರು ಶಸ್ತ್ರ ಚಿಕಿತ್ಸೆ ಮಾಡಿ ಜೀವ ಉಳಿಸಿದ್ದಾರೆ.

ಅರಕಲಗೂಡು ತಾಲೂಕು ಕೊಣನೂರು ಸಮೀಪ, ಬೈಕ್‌ನಲ್ಲಿ ಬರುವಾಗ ಮಂಜುನಾಥ್ ಎಂಬುವರ ಪುತ್ರ ಅಪಘಾತದಲ್ಲಿ ತುಂಬಾ ರಕ್ತಸ್ರಾವವಾಗಿ ಯುವಕ ಸಾಯುವ ಹಂತ ತಲುಪಿದ್ದ. ಪರೀಕ್ಷಿಸಿದ ಸ್ಥಳೀಯ ವೈದ್ಯರು ಬದುಕುವುದಿಲ್ಲ ಎಂದು ಹೇಳಿದ್ದರು.

ನಂತರ ಹೆಚ್ಚಿನ ಚಿಕಿತ್ಸೆಗಾಗಿ ಜನಪ್ರಿಯ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಯುವಕನ ತಲೆ ಬುರುಡೆ ಪುಡಿಪುಡಿಯಾಗಿ ಮೆದುಳು ಹೊರಬಂದಿತ್ತು.

ಕೈ ಮತ್ತು ಕಾಲು ಮೂಳೆ ಕೂಡ ಮುರಿದಿತ್ತು. ಆಸ್ಪತ್ರೆ ವೈದ್ಯರು ಶ್ರಮವಹಿಸಿ ಶಸ್ತ್ರ ಚಿಕಿತ್ಸೆ ಮಾಡಿ ರೋಗಿಯನ್ನು ಉಳಿಸಿ ಮತ್ತೊಂದು ದಾಖಲೆ ಮಾಡಿದ್ದಾರೆ.

ಈ ಕುರಿತು ಮಾತನಾಡಿದ ಆಸ್ಪತ್ರೆ ಮುಖ್ಯಸ್ಥರು ಮತ್ತು ಕೀಲು ಮತ್ತು ಮೂಳೆ ತಜ್ಞ ಡಾ.ವಿ.ಕೆ.ಅಬ್ದುಲ್ ಬಶೀರ್ ಅವರು, ಅಪಘಾತ ನಂತರ ಯುವಕನ ಮೈ ಕೈ ತುಂಬೆಲ್ಲ ರಕ್ತು ತುಂಬಿತ್ತು. ದೃಶ್ಯ ಭೀಕರವಾಗಿತ್ತು.



ಕಲ್ಲು-ಮಣ್ಣು ಮೆದುಳಿನ ಪದರ ಸೇರಿತ್ತು.

ಹೃದಯ ಬಡಿತಮೂ ನಿಂತಿದ್ದು, ನಾಡಿ ಮಿಡಿತ ಕೂಡ ಇರಲಿಲ್ಲ, ತಕ್ಷಣ ಹೃದಯಕ್ಕೆ ವಿದ್ಯುತ್ ಚಾಲಿತ ಡಿ-ಫಿಬ್ರಿಲೇಟರ್ ಯಂತ್ರ ಉಪಯೋಗಿಸಿ ಹೃದಯ ಬಡಿತ ಬರುವ ಹಾಗೆ ಮಾಡಿ ಮತ್ತು 8-10 ಬಾಟಲ್ ರಕ್ತವನ್ನು ನೇರವಾಗಿ ಹೃದಯಕ್ಕೆ ಪೈಪ್ ಹಾಕಿ ನೀಡಲಾಯಿತು ಎಂದರು.

ನಂತರ ಸಣ್ಣ ಭರವಸೆಯೊಂದಿಗೆ ಪೋಷಕರ ಅನುಮತಿ ಪಡೆದು ಶಸ್ತ್ರ ಚಿಕಿತ್ಸೆ ಮಾಡಲಾಯಿತು. 3 ವಾರಗಳ ಕೃತಕ ಉಸಿರಾಟದ ಯಂತ್ರದಲ್ಲಿದ್ದು, 5-6 ಶಸ್ತ್ರಚಿಕಿತ್ಸೆ ನಂತರ ಪುನರ್ಜನ್ಮ ಪಡೆದರು.

ಇದೀಗ ಯುವಕ ಎಂದಿನಂತಾಗಿದ್ದಾರೆ ಎಂದು ತಿಳಿಸಿದರು.

ಯುವಕನ ಪೋಷಕ ಮಂಜುನಾಥ್ ಮಾತನಾಡಿ, ದೇವರ ಆಶೀರ್ವಾದದಿಂದ ನನ್ನ ಮಗನಿಗೆ ವೈದ್ಯರು ಪುನರ್ಜನ್ಮ ನೀಡಿದ್ದಾರೆ ಎಂದು ಧನ್ಯವಾದ ಹೇಳಿದರು. ಮೊದಲು ನನ್ನ ಮಗ ಉಳಿಯುವುದು ಶೇ. 1ರಷ್ಟು ಎಂದು ತಿಳಿಸಿದರು, ಮಗನ ಪ್ರಾಣ ಉಳಿಸಿ ಎಂದು ಬೇಡಿಕೊಂಡೆವು. ಜನಪ್ರಿಯ ಆಸ್ಪತ್ರೆ ವೈದ್ಯರು ಶಕ್ತಿ ಮೀರಿ ಪ್ರಯತ್ನ ಮಾಡಿ ಮಗನನ್ನು ಉಳಿಸಿಕೊಟ್ಟರು ಎಂದು ಕೃತಜ್ಞತೆ ಸಲ್ಲಿಸಿದರು ಎಂದರು.

ಯಶಸ್ವಿ ಶಸ್ತ್ರ ಚಿಕಿತ್ಸೆ ನೇತೃತ್ವವನ್ನು ಡಾ. ಅಬ್ದುಲ್ ಬಶೀರ್ ಅವರ ಮುಂದಾಳತ್ವದಲ್ಲಿ, ಹಿರಿಯ ನರರೋಗ ಶಸ್ತ್ರಚಿಕಿತ್ಸಕರಾದ ಡಾ. ಶ್ರೀ ಚೇತನ್ಯ, ಡಾ. ಹರ್ಷ ಸುರೇಶ್, ಅರವಳಿಕೆ ತಜ್ಞರಾದ ಡಾ. ಸುಹಾಸ್, ಐಸಿಯು ತಜ್ಞರಾದ ಡಾ. ಮನೋಜ್ ಮತ್ತು ಸಿಬ್ಬಂದಿ ಸಹಕಾರದಿಂದ ಸಾಧ್ಯವಾಯಿತು ಎಂದರು.

# ಅಗಲಿದ ಪತ್ರಕರ್ತ-ಕುಟುಂಬಕ್ಕೆ ಶ್ರದ್ಧಾಂಜಲಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಕಲೇಶಪುರದ ಪತ್ರಕರ್ತ ಸುದರ್ಶನ್ ಹಾಗೂ ಹಳೇಬೀಡಿನ ಹಿರಿಯ ಪತ್ರಕರ್ತ ರಘುನಾಥ್ ಅವರ ತಾಯಿ ವೆಂಕಟಲಕ್ಷ್ಮಮ್ಮ ಅವರ ನಿಧನಕ್ಕೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿಂದು ಸಂತಾಪ ಸಭೆ ನಡೆಸಿ ಅಗಲಿದ ಜೀವಗಳಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ ಮಾತನಾಡಿ, ಸುದರ್ಶನ್ ಅವರು ಹಲವು ವರ್ಷಗಳಿಂದ ಪತ್ರಿಕಾ ಕ್ಷೇತ್ರದಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದರು. ತಮ್ಮ ಸರಳತೆ, ಸ್ನೇಹಪರ ಸ್ವಭಾವ ಹಾಗೂ ವೃತ್ತಿ ನಿಷ್ಠೆಯಿಂದ ಸಹೋದ್ಯೋಗಿಗಳ ಮನ ಗೆದ್ದಿದ್ದರು. ಸಕಲೇಶಪುರ ಕಾರ್ಯನಿರತ ಪತ್ರಕರ್ತರ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಂಘಟನೆ ಬಲಪಡಿಸಲು ಶ್ರಮಿಸಿದ್ದರು ಎಂದು ಸ್ಮರಿಸಿದರು.

ಕೆಲ ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಮಂಗಳೂರು, ಮಡಿಕೇರಿ ಸೇರಿದಂತೆ ವಿವಿಧ ಕಡೆ ಚಿಕಿತ್ಸೆ ಪಡೆದರೂ ಆರೋಗ್ಯದಲ್ಲಿ ಚೇತರಿಕೆ ಕಾಣಲಿಲ್ಲ. ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡುವ ಸಂಬಂಧ ಸಂಘದ ರಾಜ್ಯಾಧ್ಯಕ್ಷರೊಂದಿಗೆ ಮಾತನಾಡಲಾಗಿದೆ ಎಂದರು.

ರಘುನಾಥ್ ಅವರ ತಾಯಿ ವೆಂಕಟಲಕ್ಷ್ಮಮ್ಮ ಅವರು, ಕುಟುಂಬದ ಬೆನ್ನೆಲುಬಾಗಿದ್ದರು. ಅವರ ಪತಿ ನಂತರ ಪುತ್ರ ಈಗ ಪತ್ರಿಕೋದ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು. ಇಂದು ಬೆಳಗ್ಗೆ ಹಳೇಬೀಡಿಗೆ ತೆರಳಿ ಅವರ ದರ್ಶನ ಪಡೆಯಲಾಯಿತು ಎಂದರು.

ಮಾಜಿ ಅಧ್ಯಕ್ಷ ಬಿ.ಆರ್. ಉದಯಕುಮಾರ್ ಮಾತನಾಡಿ, ಪತ್ರಕರ್ತರ ಜೀವನ ನಿರಂತರ ಒತ್ತಡ, ಓಡಾಟ ಮತ್ತು ಜವಾಬ್ದಾರಿಗಳಿಂದ ಕೂಡಿರುತ್ತದೆ. ಸುದ್ದಿ ಬೆನ್ನಟ್ಟುವ ಧಾವಂತದಲ್ಲಿ ನಾವು ನಮ್ಮ ಆರೋಗ್ಯ ಕಡೆಗಣಿಸುತ್ತೇವೆ.

ಸುದರ್ಶನ್ ಕಳೆದ ಮೂರು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಇಂತಹ ಘಟನೆಗಳು ಆರೋಗ್ಯದ ಮಹತ್ವವನ್ನು ಮತ್ತೆ ನೆನಪಿಸುತ್ತವೆ, ಎಲ್ಲ ಪತ್ರಕರ್ತರು ಅದರಲ್ಲೂ ಎಲೆಕ್ಟ್ರಾನಿಕ್ ಮೀಡಿಯಾದ ಗೆಳೆಯಲು ಎಚ್ಚರಿಕೆ ವಹಿಸಿ ಎಂದು ಸಲಹೆ ನೀಡಿದರು. ಸಭೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜಿ. ಸುರೇಶ್, ಕಾರ್ಯದರ್ಶಿಗಳಾದ ಖುಷ್ವಂತ್, ಹರೀಶ್ ಮಾತನಾಡಿ, ಮೃತರ ಆತ್ಮಕ್ಕೆ ಶಾಂತಿ ಕೋರಿದರು. ಆರಂಭದಲ್ಲಿ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು.

# ಸಮಯ ವ್ಯರ್ಥ ಮಾಡಬೇಡಿ: ಕವಿತಾ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿದ್ಯಾರ್ಥಿಗಳು ತಮ್ಮ ಜೀವನದ ಅತ್ಯಮೂಲ್ಯ ಸಮಯವನ್ನು ಎಂದಿಗೂ ವ್ಯರ್ಥ ಮಾಡದೆ ಓದುವ ಸಮಯದಲ್ಲಿ ಗಮನವಿಟ್ಟು ವಿದ್ಯಾಭ್ಯಾಸ ಮಾಡಬೇಕು ಎಂದು ಹಾಸನ ನಗರಪಾಲಿಕೆ ಇಂಜಿನಿಯರ್ ಕೆ.ಆರ್. ಕವಿತಾ ಹೇಳಿದರು.

ನಗರದ ಆರ್.ಸಿ. ರಸ್ತೆ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಸೋಮವಾರ ನಡೆದ ಚೋಮನ ದುಡಿ ಕಾದಂಬರಿ ಕುರಿತ ವಿಮರ್ಶೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಯುವಕರು ಜಾತಿ ಅಡೆ-ತಡೆ ಮೀರಿ ಪ್ರತಿಯೊಬ್ಬರ ಮೇಲೂ ಹೃದಯವಂತಿಕೆ ಮತ್ತು ಮಾನವೀಯತೆ ಗುಣಗಳನ್ನು ಬೆಳೆಸಿಕೊಳ್ಳಬೇಕು. ಯಾವುದೇ ನಿರ್ಧಾರ ತೆಗೆದುಕೊಳ್ಳುವ



ಮೊದಲು ತಂದೆ ತಾಯಿಯನ್ನು ನೆನಪಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ವಿದ್ಯಾರ್ಥಿ ಜೀವನದಲ್ಲಿ ಸಾವಿರಾರು ದಾರಿಗಳಿದ್ದು, ಪ್ರತಿಯೊಬ್ಬರೂ ತಮ್ಮ ಆಸಕ್ತಿ ದಾರಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಪ್ರತಿಯೊಂದು ವೃತ್ತಿಗೂ ಅದರದ್ದೇ ಆದ ಗೌರವವಿದ್ದು, ಎಲ್ಲಾ ವೃತ್ತಿಗಳನ್ನು ಸಮಾನವಾಗಿ ಗೌರವಿಸುವ ಮನೋಭಾ ಬೆಳೆಸಿಕೊಳ್ಳಬೇಕು. ಗುರುಗಳ ಮಾರ್ಗದರ್ಶನ ಪಡೆದುಕೊಂಡು ವಿದ್ಯಾರ್ಥಿಗಳ ಜೀವನವನ್ನು ಉನ್ನತ್ತ ಮಟ್ಟಕ್ಕೆ ಹೋಗಬೇಕು ಎಂದರು.

ರಾಜ್ಯ ಸ್ಪಂದನ ಸಿರಿವೇದಿಕೆ ಅಧ್ಯಕ್ಷೆ ಕಲಾವತಿ ಮಧುಸೂಧನ್ ಮಾತನಾಡಿ, ಮಕ್ಕಳಲ್ಲಿ ಸಮಾಜಿಕ ಮೌಲ್ಯಗಳನ್ನು ಬೆಳೆಸುವುದರಿಂದ ಉತ್ತಮ ಸಮಾಜ ನಿರ್ಮಾಣ ಮಾಡಬಹುದು.

ಸಾಹಿತ್ಯ ಅಭಿರುಚಿ ಮಕ್ಕಳ ಮನಸ್ಸಿಗೆ ಸಂಸ್ಕಾರ, ಸೃಜನಶೀಲತೆ ಮತ್ತು ಮಾನವೀಯv ಮೌಲ್ಯಗಳನ್ನು ತುಂಬುತ್ತದೆ. ಅತ್ಮಸ್ಥೈರ್ಯ ಹೊಂದಿದ ಮಕ್ಕಳು ಭವಿಷ್ಯದಲ್ಲಿ ಉತ್ತಮ ನಾಗರೀಕರರಾಗಿ ಬೆಳೆಯುತ್ತಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಿ.ಎಕ. ಮಂಜಯ್ಯ ಮಾತನಾಡಿ, ಕನ್ನಡದ ಚೋಮನ ದುಡಿ ಕಾದಂಬರಿ ಕೇವಲ ಒಬ್ಬ ವ್ಯಕ್ತಿಯ ಕಥೆಯಲ್ಲ ಸಮಾಜದ ಹಿಂದುಳಿದವರ ಬದುಕಿನ ನೈಜ್ಯ ಚಿತ್ರಣವಾಗಿದೆ. ಚೋಮನ ಜೀವನದ ಮೂಲಕ ಬಡತನ ಜಾತಿ ಸಮಸ್ಯೆಗಳನ್ನು ಲೇಖಕರು ಮನಮುಟ್ಟುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಜೀವನದಲ್ಲಿ ಎಷ್ಟೇ ಕಷ್ಟ ಬಂದರೂ ಧೈರ್ಯ ಮತ್ತು ಆತ್ಮವಿಶ್ವಾಸ ಕಳೆದುಕೊಳ್ಳಬಾರದು.

ಸ್ಪರ್ಧಾತ್ಮಕ ಪರಿಕ್ಷೇಗಳಲ್ಲಿ ಯಶಸ್ಸು ಸಾಧಿಸಲು ನಿರಂತರ ಓದು, ಪರಿಶ್ರಮ, ಮತ್ತು ಸಮಯ ಅಗತ್ಯ ಎಂದು ಹೇಳಿದರು. ಕನ್ನಡ ವಿಭಾಗದ ಉಪನ್ಯಾಸಕರಾದ ಪೂರ್ಣಿಮ, ಕಾಂತರಾಜು ಇದ್ದರು.

# 57ನೇ ವರ್ಷದ ಜಾತ್ರಾ ಮಹೋತ್ಸವಕ್ಕೆ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ನಗರದ ಗ್ರಾಮ ದೇವತೆಗಳಾದ ಕರಿಯಮ್ಮ ಹಾಗೂ ಮಲ್ಲಿಗೆಮ್ಮ ದೇವಿಯರ 57ನೇ ವರ್ಷದ ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆತಿದೆ.

ಜಾತ್ರಾ ಮಹೋತ್ಸವದ ಮೊದಲನೇ ದಿನವಾದ ಸೋಮವಾರ ಮುಂಜಾನೆ ಊರ ಒಳಗಿನ ಮಲ್ಲಿಗೆಮ್ಮ ದೇವಸ್ಥಾನದಲ್ಲಿ ಅಮ್ಮನವರ ಮೂಲ ವಿಗ್ರಹಕ್ಕೆ ರುದ್ರಾಭಿಷೇಕ ಸೇರಿದಂತೆ ನಾನಾ ಅಭಿಷೇಕಗಳು ಬಿಲ್ವಾರ್ಚನೆ ಒಳಗೊಂಡಂತೆ ವಿವಿಧ ಅರ್ಚನೆಗಳು ದೇವಾಲಯದ ಸಂಪ್ರದಾಯದಂತೆ ನಡೆದವು.

ಮಹಾ ಮಂಗಳಾರತಿ ಬಳಿಕ ಪಾಯಸ ಹೋಳಿಗೆ ಸೇರಿದಂತೆ ಮಲ್ಲಿಗೆಮ್ಮ ದೇವಿಗೆ ಪ್ರಿಯವಾದ ಸಿಹಿ ಪ್ರಸಾದಗಳನ್ನು ಶ್ರದ್ಧೆ ಭಕ್ತಿಯಿಂದ ಮಾಡಿಕೊಂಡು ಬಂದಿದ್ದ ಭಕ್ತರು ಅಮ್ಮನಿಗೆ ನೈವೇದ್ಯ ಮಾಡಿ ನಂತರ



ನೆರೆದಿದ್ದ ಭಕ್ತರಿಗೆ ವಿತರಿಸಿ ತೆರಳುವ ದೃಶ್ಯ ಸಾಮಾನ್ಯವಾಗಿ ಕಂಡು ಬಂತು.

ಉತ್ಸವ ಬಾನ ನೈವೇದ್ಯ : ಮಂಗಳವಾರ ಸಂಜೆ ಊರ ಒಳಗಿನ ಮಲ್ಲಿಗೆಮ್ಮ ದೇವಸ್ಥಾನದಿಂದ ಮೂಲಸ್ಥಾನದಲ್ಲಿ ನೆಲೆಸಿರುವ ಕರಿಯಮ್ಮ ದೇವಾಲಯದವರೆಗೆ ಕೆಂಚರಾಯ ದೂತರಾಯ ಹಾಗೂ ಚೆಲುವರಾಯಸ್ವಾಮಿ ಸಮೇತ ಮಲಿಗೆಮ್ಮ ಮತ್ತು ಕರಿಯಮ್ಮ ದೇವಿಯರ ಉತ್ಸವು ಜರಗಲಿದೆ.

ಈಗಾಗಲೇ ಉತ್ಸವ ಸಾಗುವ ಮಾರ್ಗ ಸೇರಿದಂತೆ ನಗರದ ಪ್ರಮುಖ ರಸ್ತೆಗಳು ವಿದ್ಯುತ್ ದೀಪಗಳ ಅಲಂಕಾರದಿಂದ ಜಗಮಗಿಸುತ್ತಿವೆ.

ರಾತ್ರಿ ಉತ್ಸವವು ಕರಿಯಮ್ಮ ದೇವಿಯ ಆಲಯ ತಲುಪುತ್ತಿದ್ದಂತೆ ಕರಿಯಮ್ಮ ದೇವಿ ಕೆಚ್ಚರಾಯಸ್ವಾಮಿ ಮತ್ತು ದೂತರಾಯ ಸ್ವಾಮಿ ಸೇರಿದಂತೆ ಪರಿವಾರ ದೇವತೆಗಳಿಗೆ ಬಾನ ನೈವೇದ್ಯ ನಡೆಯಲಿದ್ದು ಸಾವಿರಾರು ಸಂಖ್ಯೆಯಲ್ಲಿ ನಗರದ ಜನತೆ ಒಳಗೊಂಡಂತೆ ರಾಜ್ಯದ ನಾನಾ ಭಾಗಗಳಿಂದ ಭಕ್ತರ ದಂಡು ಆಗಮಿಸುವುದರಿಂದ ಈಗಾಗಲೇ ದೇವಾಲಯದ ಅಭಿವೃದ್ಧಿ ಸಮಿತಿ ಹಾಗೂ ಪೊಲೀಸ್ ಇಲಾಖೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿವೆ.

ರಥೋತ್ಸವ : ಬುಧವಾರ ಗಂಗಸ್ಥಾನ, ಗುರುವಾರ ಮಧ್ಯಾಹ್ನ ಗ್ರಾಮ ದೇವತೆಯರ ಮಹಾ ರಥೋತ್ಸವ ಭಕ್ತರ ಶ್ರದ್ಧಾ ಭಕ್ತಿಯೊಂದಿಗೆ ವಿಜೃಂಭಣೆಯಿಂದ ಜರುಗಲಿದ್ದು, ದೇವಸ್ಥಾನ ಸಮಿತಿ ಹಾಗೂ ಭಕ್ತವೃಂದ ಸನ್ನದ್ಧವಾಗಿದೆ.

ಅಲ್ಲದೆ ಮಹಾ ರಥೋತ್ಸವದಲ್ಲಿ ಪಾಲ್ಗೊಳ್ಳುವ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯನ್ನು ಪ್ರತಿವರ್ಷದಂತೆ ಈ ವರ್ಷಮೂ ಸಹ ಹಮ್ಮಿಕೊಳ್ಳಲಾಗಿದೆ ಎಂದು ಜಾತ್ರಾ ಮಹೋತ್ಸವ ಆಚರಣೆ ಸಮಿತಿ ಮಾಹಿತಿ ನೀಡಿದೆ.

ನೂರ ಒಂದೆಡೆ ಸೇವೆ : ಇಂದು ರಾತ್ರಿ ಗ್ರಾಮ ದೇವತೆಯಾದ ಕರಿಯಮ್ಮ ಮತ್ತು ಮಲ್ಲಿಗೆಮ್ಮ ಹಾಗೂ ಮೂರು ಕಳಸ ಮಠದ ಸಿದ್ಧರಾಮೇಶ್ವರ ಸ್ವಾಮಿ ಸಮ್ಮುಖದಲ್ಲಿ ಕೆಂಗಲ್ ಸಿದ್ದೇಶ್ವರ ಸ್ವಾಮಿಗೆ 101 ಎಡೆ ಸೇವೆ ನಡೆಯಲಿದೆ.

# ಜಿಲ್ಲಾ ಮಟ್ಟದ ಪ್ರಶಸ್ತಿ ಪ್ರದಾನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದಲ್ಲಿಂದು ವಿಜಯ ಕರ್ನಾಟಕ ದಿನಪತ್ರಿಕೆ ವತಿಯಿಂದ ಆಯೋಜಿಸಿದ್ದ ವಿಕ ಸೂಪರ್ ಸ್ಟಾರ್ ರೈತ 2025-26 ಹಾಸನ ಜಿಲ್ಲಾಮಟ್ಟದ ಪ್ರಶಸ್ತಿ ಪುರಸ್ಕಾರ ಸಮಾರಂಭ ಕಾರ್ಯಕ್ರಮದಲ್ಲಿ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಭಾಗವಹಿಸಿದರು.

ಶೇ.90 ರಷ್ಟು ರೈತರನ್ನೇ ಹೊಂದಿರುವ ಹಾಸನ ಜಿಲ್ಲೆ ನಾಡಿಗೆ ಅನ್ನ ಹಾಕುವ ರೈತರು ನಮ್ಮೆಲ್ಲರ ಹೆಮ್ಮೆ, ರೈತ ಈ ದೇಶದ ಬೆನ್ನೆಲುಬು ಅವರಿಗೆ ಗೌರವ ಸಲ್ಲಿಸಬೇಕಿರುವುದು ಎಲ್ಲರ ಆದ್ಯ ಕರ್ತವ್ಯ. ಕಾರ್ಯಕ್ರಮದಲ್ಲಿ ಕೃಷಿ ಕೇತ್ರದಲ್ಲಿ ಸಾಧನೆ ಮಾಡಿದ್ದ ರೈತರನ್ನು ಗುರುತಿಸಿ ಸನ್ಮಾನಿಸಲಾಯಿತು.

ನಾವು ದೇವರಲ್ಲಿ ಬೇಡುವ ವೇಳೆ ನಮ್ಮ ದೇಶದ ರೈತರು ಹಾಗೂ ಸೈನಿಕರಿಗೋಸ್ಕರ ಬೇಡೋಣ ಎಂದು ಆಶಿಸಿದರು.

ಸಂಸದ ಶ್ರೇಯಸ್ ಎಂ.ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ತೋಟಕಾರಿಗೆ ಇಲಾಕೆ ಜೆಡಿ ಯೋಗೇಶ್, ಕೃಷಿ ತಜ್ಞ ಡಾ.ವಿಜಯ ಅಂಗಡಿ, ವಿಜಯ ಕರ್ನಾಟಕ ಪ್ರಧಾನ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ ಹಾಗೂ ಪ್ರಗತಿಪರ ರೈತರಿದ್ದರು.

# ರೈಲಿಗೆ ತಲೆಕೊಟ್ಟು ಯುವಕ ಆತ್ಮಹತ್ಯೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಯುವತಿ ವಿಚಾರಕ್ಕೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಯುವಕನೋರ್ವ ಆಡಿಯೋ ರೆಕಾರ್ಡ್ ಮಾಡಿಟ್ಟು ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕಡುವಿನಕೋಟೆ ಬಳಿ ನಡೆದಿದೆ. ತಾಲೂಕಿನ ಮಾಕವಳ್ಳಿ ಗ್ರಾಮದ ಅಭಿಷೇಕ್ (26) ಮೃತ ಯುವಕ. ಇದೇ ಗ್ರಾಮದ ಶಂಕರ, ದರ್ಶನ್, ಚೇತನ್, ದಿನೇಶ್ ಎಂಬವರು ಯುವತಿಯೊಬ್ಬಳ ವಿಚಾರದಲ್ಲಿ ನನಗೆ ಕಿರುಕುಳ ನೀಡಿದ್ದಾರೆ. ನಾಲ್ವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ ಎಂದು ಆಡಿಯೋ ರೆಕಾರ್ಡ್ ಮಾಡಿಟ್ಟು ಭಾನುವಾರ ಸಂಜೆ ರೈಲಿಗೆ ಸಿಲುಕಿ ಆತ್ಮಹತ್ಯೆಗೆ ಶರಣಾಗಿದ್ದಾನೆ. ಸ್ಥಳೀಯ ಪೊಲೀಸರು ಪ್ರಕರಣ ದಾಖಲಿಕೊಂಡು ತನಿಖೆ ಕೈಗೊಂಡಿದ್ದಾರೆ.

# ಕನ್ನಡ ಸಾಹಿತ್ಯ ನಿತ್ಯ ನಿರಂತರ ಬೆಳೆಯಲಿ : ಉದಯರವಿ

## ಗೊರೂರು ಅನಂತರಾಜು ಅವರ ಸಾಗುತಾ ಇದೆ ದೋಣಿ ನದಿಯ ನೀರನು ಸೀಳುತಾ ಕೃತಿ ಲೋಕಾರ್ಪಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಕನ್ನಡ ಸಾಹಿತ್ಯ ಬಹಳ ವಿಶಿಷ್ಟವಾಗಿದ್ದು ಅದು ನಿತ್ಯ ನಿರಂತರ ಬೆಳೆಯುತ್ತಿರಲಿ. ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಪೂರಕವಾಗಿ ಸಾಹಿತಿಗಳು ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಹಾಸನ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಉದಯರವಿ ಹೇಳಿದರು.

ನಗರದ ಕೃಷ್ಣ ಹೋಟೆಲ್ ನಲ್ಲಿ ಕದಂಬ ಸೈನ್ಯ ಕನ್ನಡ ಸಂಘಟನೆ, ಹಾಸನ ಜಿಲ್ಲಾ ಘಟಕದಿಂದ ಜಿಲ್ಲೆಯ ಹಿರಿಯ ಸಾಹಿತಿಗಳು ಗೊರೂರು ಅನಂತರಾಜು ಅವರ ಇತ್ತೀಚಿನ ಸಾಹಿತ್ಯ ಕೃತಿಗಳ ವಿಮರ್ಶಾ ಗ್ರಂಥ ಸಾಗುತಾ ಇದೆ ದೋಣಿ ನದಿಯ ನೀರನು ಸೀಳುತಾ ಕೃತಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು ಪುಸ್ತಕ ಬಿಡುಗಡೆ ಕಾರ್ಯಕ್ರಮಗಳನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಾಹಿತಿಗಳನ್ನು ಗುರುತಿಸುವ ಮೂಲಕ ಮಾಡಬೇಕು. ಆ ಮೂಲಕ ಸಾಹಿತ್ಯ ವಲಯದ ಉಳಿವಿಗೆ ಕಾರ್ಯ ಪ್ರವೃತ್ತವಾಗಬೇಕು ಎಂದು ಹೇಳಿದರು.

ಇದೇ ವೇಳೆಯಲ್ಲಿ ಸುರ್ವೆ ಪತ್ರಿಕೆ ಸಂಪಾದಕರು ರಮೇಶ್ ಸುರ್ವೆ ಅವರ ಸಾಹಿತ್ಯ ಸಾಂಸ್ಕೃತಿಕ ಸೇವೆಯನ್ನು ಸ್ಮರಿಸಿ ಸನ್ಮಾನಿಸಲಾಯಿತು. ಸನ್ಮಾನಿತರಾದ ರಮೇಶ್ ಸುರ್ವೆರವರು ಮಾತನಾಡಿ ಹಾಸನ ಜಿಲ್ಲೆ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಕೊಡುಗೆಯನ್ನು ನೀಡಿದೆ ಎಂಬುದನ್ನು ಸ್ಮರಿಸಿದರು.

ಸಾಹಿತಿ ಗೊರೂರು ಅನಂತರಾಜುರವರು ಮಾತನಾಡಿ ಲೋಕಾರ್ಪಣೆಗೊಂಡ ಕೃತಿಗೆ ರಮೇಶ್ ಸುರ್ವೆ ರವರು ಬೆನ್ನುಡಿ ಬರೆದಿದ್ದು, ಉದಯರವಿ ರವರಿಂದ ಲೋಕಾರ್ಪಣೆಗೊಂಡಿರುವುದು ಸಂತಸ ತಂದಿದೆ ಎಂದರು.

ಕದಂಬ ಸೈನ್ಯ ಹಾಸನ ಜಿಲ್ಲಾ ಅಧ್ಯಕ್ಷರು ಹಾಗೂ ನಿವೃತ್ತ ಪ್ರಾಂಶುಪಾಲರು ಎ.ಹೆಚ್.ಗಣೇಶ್ ಅಂಕಪುರ ರವರು ಮಾತನಾಡಿ ಸಾಹಿತ್ಯ ವಲಯದ ಬೆಳವಣಿಗೆಗೆ ಪೂರಕವಾಗಿ ಅಳಿಲು ಸೇವೆ ಮಾಡಲು ಸದಾ ಸಿದ್ಧರಿರಬೇಕು ಎಂದರು.

ಸಿರಿಗನ್ನಡ ವೇದಿಕೆ ಹಾಸನ ಜಿಲ್ಲಾಧ್ಯಕ್ಷರು ಮತ್ತು ಸಿರಿ ಕನ್ನಡ ದಿನಪತ್ರಿಕೆ ಸಂಪಾದಕರಾದ ಆನಂದ ಪಟೇಲ್ ನೆಲ್ಲಿಗೆರೆ ರವರು ಮಾತನಾಡಿ ಪುಸ್ತಕಗಳನ್ನು ತೆರೆಯುವ ಮೂಲಕ ಸಾಹಿತ್ಯ ಭಂಡಾರ ತೆರೆದುಕೊಳ್ಳುತ್ತದೆ ಮತ್ತು ಆ ಮೂಲಕ ಜ್ಞಾನ ಭಂಡಾರದ ಅರಿವು ನಮಗಾಗುತ್ತದೆ. ಪರಮಾತ್ಮನು ಶ್ರೇಷ್ಠನಿರಲು ನಾವೆಲ್ಲರೂ ಶೂನ್ಯರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಾಸನ ತಾ. ಅಧ್ಯಕ್ಷರಾದ ಕುಮಾರ್, ಸಕಲೇಶಪುರ ತಾಲ್ಲೂಕು ಅಧ್ಯಕ್ಷರು ಹಾಗೂ ಲೇಖಕರಾದ ವಿಶ್ವಾಸ್ ಡಿ ಗೌಡ, ಹಾಗೂ ಸಾಹಿತಿ ಗೊರೂರು ಅನಂತರಾಜು, ಲೇಖಕರು ಹಾಗೂ ಶಿಕ್ಷಕರಾದ ಚಿದಾನಂದ ಕೆ..ಎನ್. ಲೇಖಕಿ ಶ್ರೀವಿಜಯಹಾಸನ್, ಶ್ರೀ ಶಾರದ ಕಲಾ ಸಂಘದ ಅಧ್ಯಕ್ಷರು ಹಾಗೂ ಕಲಾವಿದರು ಹೆಚ್. ಜಿ. ಗಂಗಾಧರ್, ಗೋಡೆ ಬರಹಗಾರ ಯಾಕೂಬ್, ಗಾಯಕ ಜೆ.ಆರ್.ಶ್ರೀಕಾಂತ್ ಉಪಸ್ಥಿತರಿದ್ದರು.

# ಅಂಚೆ ಮತ ಮರು ಎಣಿಕೆ ಫಲಿತಾಂಶಕ್ಕೆ SC ತಡೆ

## ಶೃಂಗೇರಿ ಶಾಸಕರಾಗಿ ರಾಜೇಗೌಡ ಮುಂದುವರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮಹತ್ವದ ತಾತ್ಕಾಲಿಕ ತಡೆ ಆದೇಶ ನೀಡಿದೆ. ಕರ್ನಾಟಕ ಹೈಕೋರ್ಟ್ ಸೂಚಿಸಿದ್ದ ಮರು ಎಣಿಕೆಯ ಫಲಿತಾಂಶದ ಜಾರಿಗೆ ತಡೆ ನೀಡಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ನಾಯಕ ಟಿ.ಡಿ. ರಾಜೇಗೌಡ ಅವರು ಈಗಿನಂತೆ ಶೃಂಗೇರಿ ಶಾಸಕರಾಗಿ ಮುಂದುವರಿಯಲಿದ್ದಾರೆ.

2023ರ ವಿಧಾನಸಭಾ



ಚುನಾವಣೆಯಲ್ಲಿ ಟಿ.ಡಿ. ರಾಜೇಗೌಡ ಅವರು ಅಲ್ಪ ಮತಾಂತರದಿಂದ ಗೆಲುವು ಸಾಧಿಸಿದ್ದರು. ಬಳಿಕ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರು ಅಂಚೆ ಮತಗಳ ಮರು ಎಣಿಕೆ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು.

ಈ ಹಿನ್ನೆಲೆಯಲ್ಲಿ ಹೈಕೋರ್ಟ್ ಮರು ಎಣಿಕೆಗೆ ಆದೇಶ ನೀಡಿತ್ತು. ನಂತರ ನಡೆದ ಪ್ರಕ್ರಿಯೆಯಲ್ಲಿ ಫಲಿತಾಂಶದಲ್ಲಿ ಬದಲಾವಣೆ ಕಂಡುಬಂದ ಹಿನ್ನೆಲೆಯಲ್ಲಿ ರಾಜೇಗೌಡ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯನ್ನು ವಿಚಾರಿಸಿದ ಸುಪ್ರೀಂ ಕೋರ್ಟ್ ಮರು ಎಣಿಕೆ ಫಲಿತಾಂಶದ ಜಾರಿಗೆ ತಾತ್ಕಾಲಿಕ ತಡೆ ನೀಡಿದ್ದು, ಮುಂದಿನ ವಿಚಾರಣೆ ನಡೆಯುವವರೆಗೆ ಸ್ಥಿತಿಗತಿ ಯಥಾಸ್ಥಿತಿಯಲ್ಲಿ ಇರಲಿ ಎಂದು ತಿಳಿಸಿದೆ.

# ಕಾಣೆಯಾದ ವ್ಯಕ್ತಿ ಪತ್ತೆಗೆ ಸಹಕರಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಆಲೂರು ತಾಲ್ಲೂಕು, ಹೊಸ ಕೋಟೆ ಹೋಬಳಿ, ಮಾದಿಹಳ್ಳಿ ಗ್ರಾಮದ ನಾಗರಾಜು ಎಂಬ 50 ವರ್ಷದ ವ್ಯಕ್ತಿ ಕಾಣೆಯಗಿದ್ದು, ಆಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದುಂಡು ಮುಖ, ಸಾದಾರಣ ಮೈಕಟ್ಟು, 5.5 ಅಡಿ ಎತ್ತರ, ಎಣ್ಣೆಗೆಂಪು ಮೈಬಣ್ಣ, ಎಡಗೈಯಲ್ಲಿ ಗಾಯದ ಗುರುತು, ಕನ್ನಡ ಭಾಷೆ ಮಾತನಾಡುತ್ತಾರೆ, ಬಾದಾಮಿ ಬಣ್ಣದ ಶರ್ಟ್ ಮತ್ತು ಕಪ್ಪು ಬಣ್ಣದ ಗೋಲ್ಡ್ ಗೆರೆ ಇರುವ ಪ್ಯಾಂಟ್ ಧರಿಸಿರುತ್ತಾರೆ.

ಈ ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಆಲೂರು ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 08170-2182312, ಪೋಲಿಸ್ ಇನ್ಸ್ ಫೆಕ್ಟರ್ ದೂರವಾಣಿ ಸಂಖ್ಯೆ 9480804739 ಮತ್ತು 9480804752ಗೆ ಮಾಹಿತಿ ನೀಡಬಹುದಾಗಿದೆ ಎಂದು ಆಲೂರು ಪೊಲೀಸ್ ಠಾಣೆಯ ಉಪನೀರಿಕ್ಷಕು ತಿಳಿಸಿದ್ದಾರೆ.

# 3 ಲಕ್ಷ ಜನರಿಗೆ ಬಾಡೂಟ!

## ಒಂದೇ ದಿನದಲ್ಲಿ 20 ಕೋಟಿ ರೂ. ವೆಚ್ಚ : ಟ್ರಾಫಿಕ್ ಜಾಮ್ ನಲ್ಲಿ ಜನ ಹೈರಾಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನಗರದ ಹೊರವಲಯದ ಬೂವನಹಳ್ಳಿಯಲ್ಲಿ ಭಾನುವಾರ ನಡೆದ ದೇವೀರಮ್ಮ ಜಾತ್ರಾ ಮಹೋತ್ಸವದ 'ಬಂಡಿ ಹಬ್ಬ' ಕಂಡು ಕೇಳರಿಯದ ಇತಿಹಾಸ ಸೃಷ್ಟಿಸಿದೆ.

ಹಾಸನ : ಇಡೀ ಗ್ರಾಮವೇ ಅಕ್ಷರಶಃ ಮಾಂಸಾಹಾರದ ಘಮಲಿನಲ್ಲಿ ಮಿಂದೆದ್ದಿದ್ದು, ಬರೋಬ್ಬರಿ 3 ಲಕ್ಷಕ್ಕೂ ಅಧಿಕ ಮಂದಿ ಭರ್ಜರಿ ಬಾಡೂಟ ಸವಿದಿದ್ದಾರೆ. 10 ವರ್ಷಗಳ ನಂತರ ಬಂದ ಈ ಆತಿಥ್ಯದ ಸಂಪ್ರದಾಯ ಪಾಲನೆ ಹಾಗೂ ಅತಿಥಿಗಳ ಸತ್ಕಾರಕ್ಕಾಗಿ ಗ್ರಾಮಸ್ಥರು ಒಂದೇ ದಿನದಲ್ಲಿ ಬರೋಬ್ಬರಿ 20 ಕೋಟಿ ರೂಪಾಯಿಗೂ ಅಧಿಕ ಹಣವನ್ನು ನೀರಿನಂತೆ ಖರ್ಚು ಮಾಡಿದ್ದಾರೆ.

### ಊರಿಡೀ ಘಮಘಮಿಸಿದ ಬಾಡೂಟ

ಒಂದೂವರೆ ಸಾವಿರ ಮನೆಗಳಿರುವ ಬೂವನಹಳ್ಳಿ ಗ್ರಾಮದಲ್ಲಿ ಭಾನುವಾರ ಎಲ್ಲಿ ನೋಡಿದರೂ ಜನಸಾಗರ. ಪ್ರತಿ ಮನೆಯವರು ತಲಾ 200 ರಿಂದ 300 ಜನ ನೆಂಟರಿಷ್ಟರು ಹಾಗೂ ಸ್ನೇಹಿತರಿಗೆ ಆಮಂತ್ರಣ ನೀಡಿದ್ದರು. ಅತಿಥಿಗಳಿಗೆ ಊಟ ಬಡಿಸಲೆಂದೇ ಮನೆಗಳ ಎದುರು, ಸಮೀಪದ ಖಾಲಿ ಜಾಗಗಳಲ್ಲಿ ಬೃಹತ್ ಶಾಮೀಯಾನಗಳನ್ನು ಹಾಕಲಾಗಿತ್ತು. ಜಾಗದ ಕೊರತೆ ಇದ್ದವರು ಹಾಸನದ ಕಲ್ಯಾಣ ಮಂಟಪಗಳು ಹಾಗೂ ಕನ್ವೆನ್ಷನ್ ಹಾಲ್‌ಗಳನ್ನು ಬಾಡಿಗೆಗೆ ಪಡೆದು ಅಲ್ಲಿಯೇ ಅತಿಥಿ ಸತ್ಕಾರದ ವ್ಯವಸ್ಥೆ ಮಾಡಿದ್ದರು. ಖಾದ್ಯಗಳ ಘಮ, ಕುರಿ-ಕೋಳಿಗಳ ಮಾಂಸದೂಟದ ಭರ್ಜರಿ ಸಿದ್ಧತೆ ಇಡೀ ಹಬ್ಬದ ಕಳೆ ಹೆಚ್ಚಿಸಿತ್ತು.

### ಬಂಡಿ ಹಬ್ಬದ 20 ಕೋಟಿಯ ಲೆಕ್ಕಾಚಾರ!

ಗ್ರಾಮದಲ್ಲಿ ನಡೆದ ಈ ಬೃಹತ್ ಮಟ್ಟದ ಆತಿಥ್ಯದ ವೆಚ್ಚವನ್ನು ಅಂದಾಜಿಸಿದರೆ ಕನಿಷ್ಠ 20 ಕೋಟಿ ರೂ. ದಾಟುತ್ತದೆ ಎಂದು ಲೆಕ್ಕಾಚಾರ ನಡೆಸಲಾಗುತ್ತಿದೆ.




ಬೂವನಹಳ್ಳಿಯ 1,500 ಮನೆಗಳು ಸರಾಸರಿ 200 ಜನರಿಗೆ ಊಟ ಹಾಕಿದರೂ, ಕನಿಷ್ಠ 3 ಲಕ್ಷ ಜನರು ಊಟ ಮಾಡಿದ್ದಾರೆ. ಒಬ್ಬರ ಬಾಡೂಟಕ್ಕೆ ಕನಿಷ್ಠ 400 ರಿಂದ 500 ರೂ. ವೆಚ್ಚವಾದರೂ, ಕೇವಲ ಊಟಕ್ಕಾಗಿಯೇ 12 ರಿಂದ 15 ಕೋಟಿ ರೂ. ಖರ್ಚಾಗಿದೆ.

ಬಾಡೂಟದ ಜೊತೆಗೆ ಮದ್ಯಪಾನದ ವ್ಯವಸ್ಥೆಯೂ ಜೋರಾಗಿಯೇ ಇದ್ದು, ಮದ್ಯದ ಖರೀದಿಗಾಗಿಯೇ 3 ರಿಂದ 4 ಕೋಟಿ ರೂ. ವಹಿವಾಟು ನಡೆದಿರುವ ಸಾಧ್ಯತೆಯಿದೆ. ಶಾಮೀಯಾನ, ಕನ್ವೆನ್ಷನ್ ಹಾಲ್ ಬಾಡಿಗೆ, ಕುರ್ಚಿ-ಟೇಬಲ್ ಹಾಗೂ ಇತರ ಸಿದ್ಧತೆಗಳಿಗೆ 1-2 ಕೋಟಿ ರೂ. ವೆಚ್ಚವಾಗಿದೆ. ಒಟ್ಟಾರೆಯಾಗಿ ಒಂದೇ ದಿನದ ಈ ಹಬ್ಬದಲ್ಲಿ ಗ್ರಾಮಸ್ಥರು 20 ಕೋಟಿ ರೂಪಾಯಿಗೂ ಮೀರಿದ ಆರ್ಥಿಕ ವಹಿವಾಟು ಹಾಗೂ ವೆಚ್ಚ ಮಾಡಿರುವುದು ಈ ಬಂಡಿಹಬ್ಬದ ಬೃಹತ್ ಸ್ವರೂಪಕ್ಕೆ ಕನ್ನಡಿ ಹಿಡಿದಿದೆ.

ಮಾಂಸಾಹಾರ ಸೇವನೆಗಾಗಿ ಸುತ್ತಮುತ್ತಲಿನ ಹಳ್ಳಿಗಳು, ಹಾಸನ ನಗರ ಹಾಗೂ ಬೇರೆ ಜಿಲ್ಲೆಗಳಿಂದಲೂ ಸಾವಿರಾರು ವಾಹನಗಳಲ್ಲಿ ನೆಂಟರಿಷ್ಟರು, ಸ್ನೇಹಿತರು ಬೂವನಹಳ್ಳಿಯತ್ತ ಹರಿದು ಬಂದಿದ್ದರು. ಪರಿಣಾಮ, ಹಾಸನ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬೈಪಾಸ್ ಸೇರಿದಂತೆ ಬೂವನಹಳ್ಳಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳಲ್ಲೂ ಭಾನುವಾರ ಮಧ್ಯಾಹ್ನದಿಂದಲೇ ಕಿಲೋಮೀಟರ್‌ಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗಿತ್ತು. ಸಾವಿರಾರು ವಾಹನಗಳು ಗಂಟೆಗಟ್ಟಲೆ ರಸ್ತೆಯಲ್ಲೇ ಸಿಲುಕಿ, ವಾಹನ ಸವಾರರು ಪರದಾಡುವಂತಾಯಿತು. ಪರಿಸ್ಥಿತಿ ನಿಭಾಯಿಸಲು ಟ್ರಾಫಿಕ್ ಪೊಲೀಸರು ಹರಸಾಹಸ ಪಡಬೇಕಾಯಿತು.

ಭಾನುವಾರ ಬೆಳಗಿನಿಂದಲೇ ಆರಂಭವಾದ ಬಾಡೂಟದ ದರ್ಬಾರ್, ಮಧ್ಯರಾತ್ರಿಯಾದರೂ ಮುಗಿದಿರಲಿಲ್ಲ. ಸ್ನೇಹಿತರು, ಬಂಧು-ಬಳಗದೊಡನೆ ಸೇರಿ ಗ್ರಾಮಸ್ಥರು ತಡರಾತ್ರಿಯವರೆಗೂ ಬಂಡಿಹಬ್ಬದ ಸಂಭ್ರಮದಲ್ಲಿ ಮುಳುಗಿದ್ದರು. ಒಟ್ಟಿನಲ್ಲಿ ಬೂವನಹಳ್ಳಿಯ ದೇವೀರಮ್ಮನ ಬಂಡಿಹಬ್ಬ, ತನ್ನ ಬೃಹತ್ ಬಾಡೂಟ ಹಾಗೂ ಜನಸಾಗರದ ಮೂಲಕ ಹಾಸನ ಜಿಲ್ಲೆಯ ಮಟ್ಟಿಗೆ ಹೊಸದೊಂದು ದಾಖಲೆ ಬರೆದಿದೆ.

> ದೇವೀರಮ್ಮನ ಜಾತ್ರಾ ಮಹೋತ್ಸವ ಸುತ್ತ 10 ಹಳ್ಳಿಗಳ ಜಾತ್ರೆ. ಹನ್ನೆರಡು ವರ್ಷಗಳ ನಂತರ ನಮ್ಮೂರಿನಲ್ಲಿ ಹಬ್ಬ ನಡೆದಿದೆ. ಅತಿಥಿ ಸತ್ಕಾರ ಜೋರಾಗಿರಬೇಕು ಎನ್ನುವ ಕಾರಣಕ್ಕೆ ಪ್ರತಿ ಮನೆಯವರೂ ಭರ್ಜರಿ ಸಿದ್ಧತೆ ಮಾಡಿಕೊಂಡಿದ್ದರು. ನಿರೀಕ್ಷೆಯಂತೆ ಲಕ್ಷಾಂತರ ಜನರು ಆಗಮಿಸಿ ಆತಿಥ್ಯ ಸವಿದರು. ಅತಿಥಿಗಳು ಸಂತೃಪ್ತರಾದರೆ ನಮಗೆಲ್ಲ ಸಂತೋಷ ಎನ್ನುವುದು ನಮ್ಮೂರಿನ ಜನರ ಭಾವನೆ. ಟ್ರಾಫಿಕ್ ಜಾಮ್ ನಿಂದ ಜನರಿಗೆ ಸ್ವಲ್ಪ ತೊಂದರೆಯಾದರೂ ಹಬ್ಬದ ಸಂಭ್ರಮಕ್ಕೆ ಧಕ್ಕೆಯಾಗಲಿಲ್ಲ.
>
> - ಬಿ.ಆರ್. ಬೊಮ್ಮೇಗೌಡ, ಅಧ್ಯಕ್ಷರು, ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘ, ಬೂವನಹಳ್ಳಿ

### ಮಾಂಸಹಾರ ಹೋಟೆಲ್ ಗಳಿಗೆ ಫುಲ್ ಲಾಸ್

ಸಾಮಾನ್ಯವಾಗಿ ಭಾನುವಾರಗಳಲ್ಲಿ ಮಾಂಸಹಾರ ಹೋಟೆಲ್ ಗಳಲ್ಲಿ ವ್ಯವಹಾರ ಹೆಚ್ಚಾಗಿರುತ್ತದೆ. ಭಾನುವಾರ ಬಾಡೂಟಕ್ಕೆ ಮಹತ್ವ ನೀಡುವುದು ಇದಕ್ಕೆ ಕಾರಣ. ಆದರೆ ನಿನ್ನೆ ಬೂವನಹಳ್ಳಿ ಹಬ್ಬದ ಪರಿಣಾಮವಾಗಿ ಜನರೆಲ್ಲ ಬಾಡೂಟ ಸವಿಯಲು ಅತ್ತ ಹೋಗಿದ್ದರಿಂದ ನಗರದ ನಾನ್ ವೆಜ್ ಹೋಟೆಲ್ ಗಳಲ್ಲಿ ವ್ಯವಹಾರವೇ ನಡೆಯಲಿಲ್ಲ. ಕೆಲವರು ಇದನ್ನು ಅರಿತು ಹೋಟೆಲ್ ಬಾಗಿಲು ಮುಚ್ಚಿದ್ದರು.

## ಆಲೂಗಡ್ಡೆ ಬೆಳೆ ಉಳಿಸಲು ಮನವಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾಧಿಕಾರಿ ಕಚೇರಿಯಲ್ಲಿಂದು 2026-27ನೇ ಸಾಲಿನ ಮುಂಗಾರು ಹಂಗಾಮಿನ ಆಲೂಗಡ್ಡೆ ಬೆಳೆಯ ಬಗ್ಗೆ ಉಲ್ಲೇಖಿತ ಆಲೂಗಡ್ಡೆ, ಜಿಲ್ಲಾ, ಸಲಹಾ ಸಮಿತಿ ಸಭೆ ನಡೆಯಿತು.

ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲಿ ಸಂಸದರು, ಹಾಗೂ ಜಿಲ್ಲಾಧಿಕಾರಿಗಳ ಜೊತೆ, ರೈತ ಸಂಘದ ಪ್ರತಿ ನಿಧಿಗಳು, ರೈತರು, ಆಲೂಗಡ್ಡೆ ವರ್ತಕರು ಹಾಗೂ ಆಲೂಗಡ್ಡೆ ಜಿಲ್ಲಾ ಸಲಹಾ ಸಮಿತಿಯ ಸದಸ್ಯರು ಭಾಗವಹಿಸಿದ್ದರು.

ಜಿಲ್ಲೆಯಲ್ಲಿ ಪ್ರಮುಖ ವಾಣಿಜ್ಯ ಬೆಳೆಯಾಗಿರುವ ಆಲೂಗಡ್ಡೆ ಬೆಳೆ ಇತ್ತೀಚೆಗೆ ಸಂಪೂರ್ಣ ನಶಿಸುವ ಹಂತ ತಲುಪಿದ್ದು, ಅದನ್ನು ಉಳಿಸುವ ಸಲುವಾಗಿ ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಿ ಕೆಲಸ ಮಾಡುವ ಬಗ್ಗೆ ಸಲಹೆ ಸೂಚನೆ ನೀಡಲಾಯಿತು. ಆಲೂಗಡ್ಡೆ ಬೆಳೆ ಬೆಳೆಯಲು ಎಲ್ಲಾ ರೀತಿಯ ಅನುಕೂಲಕರ ವಾತಾವರಣ, ಉತ್ತಮ ಬಿತ್ತನೆ ಬೀಜ, ರಸಗೊಬ್ಬರ ಸೇರಿದಂತೆ. ಸರ್ಕಾರದಿಂದ ಇರುವ ಸೌಲಭ್ಯಗಳನ್ನು ಸಮಪರ್ಕವಾಗಿ ಒದಗಿಸುವಂತೆ ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಸೂಚನೆ ನೀಡಿದರು.

## ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹೋಳೆನರಸೀಪುರ ನೋಡಲ್ ಕೇಂದ್ರ ವ್ಯಾಪ್ತಿಯ 66/11ಕೆ.ವಿ.ವಿ ಕೇಂದ್ರ ದೊಡ್ಡಕಾಡನೂರು ಮತ್ತು ದೊಡ್ಡಹಳ್ಳಿ ತ್ರೈಮಾಸಿಕ ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಮೇ 13 ರಂದು ಬೆಳ್ಳಗೆ 10 ರಿಂದ ಸಂಜೆ 5 ರವರೆಗೆ ದೊಡ್ಡಕಾಡನೂರು ಶಾಖಾ ವ್ಯಾಪ್ತಿಯ ಗ್ರಾಮಗಳಾದ ದೊಡ್ಡಕಾಡನೂರು, ಸಿ.ಹಿಂದಲಹಳ್ಳಿ, ಹಿರಿತಳಾಲು, ಬಾಚಹಳ್ಳಿ, ಕಬ್ಬರು, ಕಲ್ಲೊಡೆಬೋರೆಕಾವಲ್, ದಾಳಗೌಡನಹಳ್ಳಿ, ನಗರನಹಳ್ಳಿ. ರಂಗೇನಹಳ್ಳಿ ಮರಹಳ್ಳಿ, ಹಾಗೂ ದೊಡ್ಡಹಳ್ಳಿ ವಿ.ವಿ.ಕೇಂದ್ರ ವ್ಯಾಪ್ತಿಯ ಗ್ರಾಮಗಳಾದ ಸಂತೆಮೈದಾನ, ರಾಗಿಹಳ್ಳಿಕಾವಲು. ಚೌಡಸಮುದ್ರ, ಬೀಕನಹಳ್ಳಿ. ಆಲೇನಹಳ್ಳಿ. ಮುಂಜನಹಳ್ಳಿ. ಗುಳವಿನಅತ್ತಿಗುಪ್ಪೆ, ಅರೆಕೆರೆ. ಯಡೆಗೌಡನಹಳ್ಳಿ, ಹಾಗು ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

## ಮೇ.19 ರವರೆಗೆ ನಾಲೆಗೆ ನೀರು

### ನಾಲಾ ವ್ಯಾಪ್ತಿಯ ಸಾರ್ವಜನಿಕರು ಎಚ್ಚರವಹಿಸಲು ಸೂಚನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಕುಡಿಯುವ ನೀರಿಗಾಗಿ ಹೇಮಾವತಿ ಯೋಜನಾ ವ್ಯಾಪ್ತಿಯ ಕುಡಿಯುವ ನೀರಿನ ಬೇಡಿಕೆ/ಅವಶ್ಯಕತೆಗೆ ಅನುಗುಣವಾಗಿ, ನಿಗಧಿತ ಪ್ರಮಾಣದಲ್ಲಿ ನಿಯಮಿತವಾಗಿ ಹೇಮಾವತಿ ಜಲಾಶಯದಿಂದ ನಾಲೆಗಳ ಮೂಲಕ ನೀರನ್ನು ಹೇಮಾವತಿ ಎಡದಂಡೆ ನಾಲೆಯ ಮೂಲಕ ಮೇ.19 ರವರೆಗೆ ಹರಿಸಲಾಗುವುದು, ನಾಲೆಗಳಲ್ಲಿ ನೀರನ್ನು ಹರಿಸುವ ಅವಧಿಯು ತಾತ್ಕಾಲಿಕವಾಗಿದ್ದು, ಹೇಮಾವತಿ ಜಲಾನಯನ ಹಾಗೂ ಯೋಜನಾ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದಲ್ಲಿ ಪೂರ್ವ ಮುಂಗಾರು ಮಳೆಯ ಸ್ಥಿತಿಗತಿಗಳನ್ನು ಅವಲೋಕಿಸಿ ಕುಡಿಯುವ ನೀರಿಗಾಗಿ ನಾಲೆಗಳ ಮೂಲಕ ನೀರನ್ನು ಹರಿಸಲು/ನಿಲ್ಲಿಸಲು ಅಗತ್ಯ ಕ್ರಮವಹಿಸಲಾಗುವುದು, ಕುಡಿಯುವ ನೀರಿಗಾಗಿ ಮೀಸಲಿಟ್ಟಿರುವ ಪ್ರಮಾಣದಷ್ಟು ನೀರನ್ನು ಹೇಮಾವತಿ ಜಲಾಶಯದಿಂದ ನಾಲೆ ಮೂಲಕ ಹರಿಸಲಾಗುವುದು, ಪ್ರಸ್ತುತ ನೀರಿನ ಅಭಾವವಿದ್ದು, ಈ ನೀರನ್ನು ಅಚ್ಚುಕಟ್ಟು ವ್ಯಾಪ್ತಿಯಲ್ಲಿನ ಯಾವುದೇ ಕೃಷಿ ಚಟುವಟಿಕೆಗಳಿಗೆ ಬಳಸತಕ್ಕದ್ದಲ್ಲ, ಈ ಸಂದರ್ಭದಲ್ಲಿ ಯೋಜನಾ ವ್ಯಾಪ್ತಿಯಲ್ಲಿನ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ನೀರು ಪೋಲಾಗದಂತೆ ಎಲ್ಲಾ ತುರ್ತು ಕ್ರಮ ತೆಗೆದುಕೊಂಡು, ಹೇಮಾವತಿ ಯೋಜನಾ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರು ಹಾಗೂ ರೈತರಿಗೆ ಸೂಕ್ತ ತಿಳುವಳಿಕೆ ನೀಡಿ, ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ, ಈ ಬಗ್ಗೆ ಯೋಜನಾ ವ್ಯಾಪ್ತಿಯಲ್ಲಿನ ಎಲ್ಲಾ ಸಾರ್ವಜನಿಕರು ಮತ್ತು ಅಚ್ಚುಕಟ್ಟುದಾರರು ಸುಗಮ ನೀರು ನಿರ್ವಹಣೆ ನಡೆಸುವ ನಿಟ್ಟನಲ್ಲಿ ಇಲಾಖಾ ಅಧಿಕಾರಿಗಳೊಂದಿಗೆ ಸಹಕರಿಸಬೇಕೆಂದು ಚನ್ನರಾಯಪಟ್ಟಣ ಹೇಮಾವತಿ ನಾಲಾ ವೃತ್ತ ಸೂಪರಿಂಟೆಂಡಿಂಗ್ ಇಂಜಿನಿಯರ್ ತಿಳಿಸಿದ್ದಾರೆ.

## ರಾಗಿ ಖರೀದಿಸಲು ಮೇ.15ರವೆಗೆ ಅವಧಿ ಕಡಿತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಕನಿಷ್ಟ ಬೆಂಬಲಬೆಲೆ ಯೋಜನೆಯಡಿಯಲ್ಲಿ 2025-26ನೇ ಸಾಲಿನ ರಾಗಿ ಖರೀದಿ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರವು ಮೇ.30 ರವರೆಗೆ ರೈತರಿಂದ ಎಂ.ಎಸ್.ಪಿ ರಾಗಿಯನ್ನು ಖರೀದಿ ಮಾಡಲು ಅವಧಿಯನ್ನು ನೀಡಲಾಗಿದ್ದು, ಮೇ ಮತ್ತು ಜೂನ್-2026ರ ಮಾಹೆಗೆ ಪ್ರತಿ ಮಾಹೆಗೆ ಎನ್.ಎಫ್.ಎಸ್.ಎ ಅಡಿಯಲ್ಲಿ 3+3 ಒಟ್ಟು 6 ಕೆ.ಜಿ ರಾಗಿಯನ್ನು ವಿತರಣೆ ಮಾಡಲು ಹಂಚಿಕೆ ನೀಡಲಾಗಿರುತ್ತದೆ,

ರೈತರಿಂದ ಖರೀದಿ ಕಾರ್ಯ ಮಂದಗತಿಯಲ್ಲಿ ಸಾಗುತ್ತಿರುವುದ್ದರಿಂದ ಮೇ.30 ಮೊಟಕುಗೊಳಿಸುವ ರಾಗಿ ಖರೀದಿಯ ಅಂತಿಮ ದಿನಾಂಕವನ್ನು ಮೇ.15 ಕ್ಕೆ ನಿಗದಿಪಡಿಸಲಾಗಿದೆ,

ಆದ್ದರಿಂದ ಜಿಲ್ಲೆಯ ರೈತರುಗಳು ತಮ್ಮ ರಾಗಿ ದಾಸ್ತಾನನ್ನು ಮೇ 15 ರೊಳಗೆ ಖರೀದಿ ಕೇಂದ್ರಗಳಿಗೆ ನೀಡುವಂತೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

## ಕನ್ನಡ ಅನ್ನದ ಭಾಷೆಯಾದಾಗ ಮಾತ್ರ ಕನ್ನಡ ಶಾಲೆಗಳು ಉಳಿಯಲು ಸಾಧ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಮೈಸೂರು : ಸರ್ಕಾರಿ ಕನ್ನಡ ಶಾಲೆಗಳು ಉಳಿಯಬೇಕಾದರೆ ಕನ್ನಡ 'ಅನ್ನದ ಭಾಷೆ'ಯಾದಾಗ ಮಾತ್ರ ಕನ್ನಡ ಶಾಲೆಗಳು ಉಳಿಯಲು ಸಾಧ್ಯ. ಕರ್ನಾಟಕದಲ್ಲಿ ಆಡಳಿತಕ್ಕೆ ಬರುವ ಯಾವುದೇ ಸರ್ಕಾರವಾದರೂ ಕನ್ನಡ ಶಾಲೆಗಳ ಉಳಿವಿನ ಕುರಿತು ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳ ನೇಮಕಾತಿಗಳಲ್ಲಿ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದಿದ ಮಕ್ಕಳಿಗೆ ಶೇ 25 ಮೀಸಲಾತಿ ಸೌಲಭ್ಯ ಕಲ್ಪಿಸುವ ಕಾನೂನು ಜಾರಿಗೆ ಅಗತ್ಯವಿದೆ ಎಂದು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ರಾಜ್ಯಾಧ್ಯಕ್ಷ ಕೊಟ್ರೇಶ್ ಎಸ್. ಉಪ್ಪಾರ್ ಅಭಿಪ್ರಾಯಪಟ್ಟರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ಜಿಲ್ಲಾ ಘಟಕದ ವತಿಯಿಂದ ನಗರದ ಎನ್.ಆರ್. ಮೊಹಲ್ಲಾದ ರಾಜೇಂದ್ರ ನಗರದಲ್ಲಿರುವ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದ ಛಾಯಾ ರಂಗಮಂಟಪದಲ್ಲಿ ನಡೆದ 'ಕುವೆಂಪು ಶೈಕ್ಷಣಿಕ ಚಿಂತನೆಗಳು' ಕುರಿತ ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ ಕರ್ನಾಟಕದಲ್ಲಿ ಕನ್ನಡ ಉಳಿಯಬೇಕಾದರೆ, ಮೊದಲು



ಕನ್ನಡ ಶಾಲೆಗಳು ಉಳಿಯಬೇಕು. ಕನ್ನಡ ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಉದ್ಯೋಗ ಸಿಗುವುದು ಖಾತ್ರಿಯಾದರೆ, ಆಗ ಜನ ಸಮುದಾಯ ಸಹಜವಾಗಿ ಕನ್ನಡ ಶಾಲೆಗಳತ್ತ ಮುಖ ಮಾಡುತ್ತದೆ. ಇದರಿಂದ ಕನ್ನಡ ಶಾಲೆಗಳ ಸಬಲೀಕರಣವಾಗುತ್ತದೆ. ಕನ್ನಡ ಸಾಹಿತ್ಯೇತಿಹಾಸದಲ್ಲಿ ಬಸವಣ್ಣನವರ ನಂತರ ವಿಶ್ವ ಮಾನವ ಸಾಹಿತ್ಯ ನೀಡಿದವರಲ್ಲಿ ಕುವೆಂಪು ಅಗ್ರಗಣ್ಯರು. ಆಧುನಿಕ ಕನ್ನಡ ಸಾಹಿತ್ಯ ವಲಯದ ಅಷ್ಟೂ ಪ್ರಕಾರಗಳಲ್ಲಿ ಅದ್ವಿತೀಯ ಸಾಧನೆ ಮಾಡಿದ ಮೊದಲ ಯುಗ ಪ್ರವರ್ತಕ ಕವಿ ಕುವೆಂಪು. ಆದ್ದರಿಂದಲೇ ಇವರನ್ನು ಜಗದ ಕವಿ, ಯುಗದ ಕವಿ, ರಸ ಋಷಿ ಎಂದು ಕರೆಯುತ್ತೇವೆ. ಕುವೆಂಪು ಕೇವಲ ಸಾಹಿತ್ಯ ಲೋಕದ ಧ್ರುವತಾರೆ ಅಲ್ಲ ಓರ್ವ ಶ್ರೇಷ್ಠ ಶಿಕ್ಷಣ ತಜ್ಞ ಎಂದರು. ಧರ್ಮ, ಜಾತಿ, ಲಿಂಗ ತಾರತಮ್ಯವಿಲ್ಲದ ಸಮಸಮಾಜದ ಕನಸು ನನಸು ಮಾಡುವ ಶಿಕ್ಷಣ ಪ್ರತಿಪಾದಿಸಿದ ಕುವೆಂಪು ಅವರ ಶೈಕ್ಷಣಿಕ ಚಿಂತನೆಗಳು ಸಾರ್ವಕಾಲಿಕವಾದವು ಎಂದ ಉಪ್ಪಾರ್ ಅವರು, ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನ ದೊರಕಲಿ ಎಂದಾಕ್ಷಣ ಬೇರೆಯವರಿಗೆ ಸ್ಥಾನವೇ ಇಲ್ಲವೆಂದೇನಲ್ಲ. ನಮ್ಮಲ್ಲಿಗೆ ಬೇರೆಯವರು ಬರಲಿ, ಅವರು ಅತಿಥಿಗಳಾಗಿ ಬರಲಿ. ಆದರೆ ಯಜಮಾನರಾಗಿ ಅಲ್ಲ ಎಂದು ಕವಿ ಕುವೆಂಪು ಅವರು ಹೇಳಿದ್ದಾರೆ ಎಂದು ಸ್ಮರಿಸಿದರು.

ಕನ್ನಡ ಉಪನ್ಯಾಸಕ ಡಾ. ಉಮೇಶ್ ಬೇವಿನಹಳ್ಳಿ ಮಾತನಾಡಿ "ವಿಶ್ವಜ್ಞಾನ, ವಿಶ್ವಪ್ರಜ್ಞೆ, ವಿಶ್ವಮೈತ್ರಿ ಹಾಗೂ ವಿಶ್ವಮಾನವ ಗುಣವನ್ನು ಕಲಿಸುವುದೇ ನಿಜವಾದ ಶಿಕ್ಷಣ ಎಂದು ಪ್ರತಿಪಾದಿಸಿದ ಕುವೆಂಪು ಅವರ ಶೈಕ್ಷಣಿಕ ಚಿಂತನೆಗಳ ದರ್ಶನವಾಗಬೇಕಾದರೆ, ಒಮ್ಮೆ ಮಾನಸ ಗಂಗೋತ್ರಿ ಹೊಕ್ಕಿಬರಬೇಕು. ಅಲ್ಲಿ ಕುವೆಂಪು ಅವರ ಬೌದ್ಧಿಕ ಮತ್ತು ಭೌತಿಕ ಶೈಕ್ಷಣಿಕ ನೆಲೆಗಳಿವೆ. ಯಾವುದೇ ಕಲಿಕೆ ಮಗುವಿಗೆ ಭಾರವಾಗಬಾರದು. ಮಗು ಬಯಸುವ ಶಿಕ್ಷಣ ಸಿಗಬೇಕು. ಅದರಲ್ಲೂ ಸರ್ಕಾರ ಮತ್ತು ಶಿಕ್ಷಣ ಸಂಸ್ಥೆಗಳು ಇಂಗ್ಲಿಷ್ ಮತ್ತು ಹಿಂದಿಯನ್ನು ಕಲಿಯುವಂತೆ ಮಕ್ಕಳ ಮೇಲೆ ಒತ್ತಡ ಹೇರಿ ಬಲಾತ್ಕಾರ ಮಾಡಬಾರದು. ಮಗು ಕನ್ನಡ ಮಾಧ್ಯಮದಲ್ಲಿಯೇ ಕಲಿಯುವ ವಾತಾವರಣ ನಿರ್ಮಾಣ ಆಗಬೇಕು. ಇದು ಕುವೆಂಪು ಅವರ ಆಶಯವಾಗಿತ್ತು. ಇಂದು ಶಿಕ್ಷಣ ಕ್ಷೇತ್ರ ಹಲವು ಸಂಕಷ್ಟಗಳ ಸುಳಿಯಲ್ಲಿ ಸಿಲುಕಿದೆ. ಇಂತಹ ವಿಷಮ ಸಂದರ್ಭದಲ್ಲಿ ಶಿಕ್ಷಣ ವ್ಯವಸ್ಥೆ ಕುರಿತು ರಾಜಕಾರಣಿಗಳು ಮತ್ತು ಅಧಿಕಾರಿಗಳು ತಮ್ಮ ಇಚ್ಛಾಶಕ್ತಿ ತೋರಬೇಕು. ಕುವೆಂಪು ಅವರು ನಮ್ಮ ಮಕ್ಕಳು ಕನ್ನಡ ಮಾಧ್ಯಮದಲ್ಲಿಯೇ ಕಲಿಯಲಿ. ಕನ್ನಡದಲ್ಲಿ ಕಲೆ ಮತ್ತು ವಿಜ್ಞಾನ ಕಲಿತು, ಆತ್ಮಗೌರವ ಮತ್ತು ವೈಚಾರಿಕತೆ ಬೆಳೆಸಿಕೊಂಡು ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಲಿ ಎಂದು ಸಾರಿದ ಮಹಾಚೇತನ ಎಂದರು.

ವಿಚಾರಗೋಷ್ಠಿಯನ್ನು ಹಿರಿಯ ಪತ್ರಕರ್ತ ಕೆ. ನರಸಿಂಹಮೂರ್ತಿ ಉದ್ಘಾಟಿಸಿದರು. ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ರಾಜ್ಯ ಉಪಾಧ್ಯಕ್ಷ ಟಿ. ಸತೀಶ್ ಜವರೇಗೌಡ ಆಶಯ ನುಡಿಗಳನ್ನಾಡಿದರು. ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಅಂತೋಣಿ ಪೌಲ್ ರಾಜ್, ವೇದಿಕೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ವಾಸು ಸಮುದ್ರವಳ್ಳಿ, ಜಿಲ್ಲಾ ಘಟಕದ ಅಧ್ಯಕ್ಷ ಬಸಪ್ಪ ಸಿ. ಸಾಲುಂಡಿ, ರಂಗಕರ್ಮಿ ಚಂದ್ರು ಮಂಡ್ಯ, ಯುವ ಕವಿ ಜಿ. ರವೀಂದ್ರ ಕುಮಾರ್ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಚಾಮುಂಡಿ ಬೆಟ್ಟದ ಸಾರ್ವಜನಿಕ ಪ್ರೌಢಶಾಲಾ ಶಿಕ್ಷಕ ಬಸವರಾಜು ಕುವೆಂಪು ವಿರಚಿತ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ ಆಯ್ದ ಭಾಗ ವಾಚಿಸಿದರು. ಕಾಲೇಜಿನ ಹತ್ತು ಪ್ರಶಿಕ್ಷಣಾರ್ಥಿಗಳು ಸ್ವರಚಿತ ಕವನ ವಾಚನ ಮಾಡಿದರು.

## ಸರ್ಕಾರಿ ನೌಕರರಿಗೆ ಗುಡ್ ನ್ಯೂಸ್ : ತುಟ್ಟಿಭತ್ಯೆ ಶೇ.15.75ಕ್ಕೆ ಏರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಕರ್ನಾಟಕದ ಸರ್ಕಾರಿ ನೌಕರರಿಗೆ ರಾಜ್ಯ ಸರ್ಕಾರ ಗುಡ್ ನ್ಯೂಸ್ ನೀಡಿದೆ. 2024ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನವನ್ನು ಪಡೆಯುತ್ತಿರುವ ಸರ್ಕಾರಿ ನೌಕರರಿಗೆ ಜ. 1, 2026ರಿಂದ ಜಾರಿಗೆ ಬರುವಂತೆ ತುಟ್ಟಿ ಭತ್ಯೆಯನ್ನು ಹೆಚ್ಚಳ ಮಾಡಲಾಗಿದೆ.

ಪ್ರಸ್ತುತ ಮೂಲ ವೇತನದ ಶೇ.14.25 ರಿಂದ ಶೇ.15.75ಕ್ಕೆ ಪರಿಷ್ಕರಿಸಿ ಮಂಜೂರು ಮಾಡಲು ನಿರ್ಧಾರ ಮಾಡಲಾಗಿದೆ. 2024ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ಶ್ರೇಣಿಯು ಗರಿಷ್ಠಕ್ಕಿಂತ ಹೆಚ್ಚಾಗಿ ಸ್ಥಗಿತ ವೇತನ ಬಡ್ತಿಯನ್ನು ನೀಡಲಾಗಿದ್ದರೆ, ಆ ಸ್ಥಗಿತ ವೇತನಕ ಬಡ್ತಿ ಸಿಗಲಿದೆ.

ಅಥವಾ 2024ರ ಕರ್ನಾಟಕ ನಾಗರಿಕ ಸೇವಾ ನಿಯಮಗಳ ನಿಯಮ 3(ಸಿ) ಯನ್ನು ಓದಿಕೊಂಡು 7ನೇ ನಿಯಮದ (3)ನೇ ಉಪ ನಿಯಮದ ಮೇರೆಗೆ ನೀಡಲಾದ ವೈಯಕ್ತಿಕ ವೇತನ ಇದ್ದರೆ ಅದರ ಆಧಾರದಲ್ಲಿ ತುಟ್ಟಿಭತ್ಯೆ ಹೆಚ್ಚಳ ಆಗಲಿದೆ. ಜೊತೆಗೆ




ವೇತನ ಶ್ರೇಣಿಯ ಗರಿಷ್ಠಕ್ಕಿಂತ ಹೆಚ್ಚಾಗಿ ಮಂಜೂರು ಮಾಡಲಾಗಿರುವ ಹೆಚ್ಚುವರಿ ಬಡ್ತಿ ಯಾವುದಾದರು ಇದ್ದಲ್ಲಿ ಅವುಗಳು ಸೇರುತ್ತವೆ.

ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನ ದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವಂತಹ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನದಾರರಿಗೂ ಇದು ಅನ್ವಯ ಆಗಲಿದೆ.

ಜ.1, 2026 ರಿಂದ ಜಾರಿಗೆ ಬರುವಂತೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರಗಳನ್ನು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಪ್ರಸಕ್ತ ಶೇ.14.25 ರಿಂದ ಶೇ.15.75 ಕ್ಕೆ ಹೆಚ್ಚಿಸಿ ಮಂಜೂರು ಮಾಡಲು ಸಹ ಸರ್ಕಾರ ಆದೇಶದಲ್ಲಿ ಉಲ್ಲೇಖಿಸಿದೆ.

ತುಟ್ಟಿ ಭತ್ಯೆ ಮಂಜೂರಾತಿ ಉದ್ದೇಶಕ್ಕಾಗಿ ಕ.ನಾ.ಸೇ(ಪ.ವೇ) ನಿಯಮಗಳು, 2024ರ ನಿಯಮ 3ರಲ್ಲಿ ಸೂಚಿಸಿರುವ ಮತ್ತು ಈ ನಿಯಮದಡಿ ಹೊರಡಿಸಿರುವ ಆದೇಶಗಳಲ್ಲಿ ಸೂಚಿಸಿರುವ ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ ಹೊರತುಪಡಿಸಿ ಇತರೆ ಯಾವುದೇ ಉಪಲಬ್ಧಗಳನ್ನು ಸೇರಿಸತಕ್ಕದ್ದಲ್ಲ ಎಂದಿದೆ.

ಯುಜಿಸಿ/ಎಐಸಿಟಿಇ/ಐಸಿಎಆರ್ ವೇತನ ಶ್ರೇಣಿಗಳ ನಿವೃತ್ತ ನೌಕರರಿಗೂ ಈ ಆದೇಶ ಅನ್ವಯಿಸುತ್ತವೆ. ಸರ್ಕಾರದ ಮತ್ತು ಜಿಪಂ ಪೂರ್ಣಾವಧಿ ನೌಕರರಿಗೆ, ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ವರ್ಕ್‌ಚಾರ್ಜ್ ನೌಕರರಿಗೆ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ವಿವಿ ಗಳಲ್ಲಿ ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ನೌಕರರಿಗೆ ಆದೇಶ ಅನ್ವಯಿಸುತ್ತದೆ.

ಯುಜಿಸಿ/ಎಐಸಿಟಿಇ/ಐಸಿಎಆರ್ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ನೌಕರರಿಗೆ ಮತ್ತು ಎನ್‌ಜೆಪಿಸಿ ವೇತನ ಶ್ರೇಣಿಗಳ ನ್ಯಾಯಾಂಗ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು ಎಂದು ತಿಳಿಸಲಾಗಿದೆ.

ಈ ಆದೇಶದ ಮೇರೆಗೆ ಲಭ್ಯವಿರುವ ತುಟ್ಟಿ ಭತ್ಯೆಯನ್ನು ಮುಂದಿನ ಆದೇಶದವರೆಗೆ ನಗದಾಗಿ ಪಾವತಿ ಮಾಡಲಾಗುವುದು. ತುಟ್ಟಿಭತ್ಯೆಯ ಕಾರಣದಿಂದ ಸಂದಾಯ ಮಾಡಬೇಕಾಗಿರುವ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ವ್ಯತ್ಯಾಸಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು ಎಂದು ಉಲ್ಲೇಖ ಮಾಡಲಾಗಿದೆ.

ಈ ಆದೇಶದನ್ವಯ ಲಭ್ಯವಾಗುವ ತುಟ್ಟಿಭತ್ಯೆ ಬಾಕಿ ಮೊತ್ತವನ್ನು, 2026ರ ಮೇ ತಿಂಗಳ ವೇತನ/ಪಿಂಚಣಿ ಬಟವಾಡೆಗೂ ಮೊದಲು ಪಾವತಿ ಮಾಡತಕ್ಕದ್ದಲ್ಲ. ತುಟ್ಟಿಭತ್ಯೆಯನ್ನು ಸಂಭಾವನೆಯ ವಿಶಿಷ್ಟ ಅಂಶವಾಗಿ ತೋರಿಸುವುದು ಮತ್ತು ಯಾವುದೇ ಉದ್ದೇಶಕ್ಕಾಗಿ ಇದನ್ನು ವೇತನ ಎಂದು ಪರಿಗಣಿಸಲಾಗುವುದಿಲ್ಲ ಎಂದು ಆದೇಶದಲ್ಲಿ ಉಲ್ಲೇಖ ಮಾಡಲಾಗಿದೆ.

## ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ಅರ್ಜಿ ಅಹ್ವಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 2024-25ನೇ ಸಾಲಿನ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪ್ರವಾಸೋದ್ಯಮ/ಅತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಅಭ್ಯರ್ಥಿಗಳಿಂದ ಮೊತ್ತೊಮ್ಮೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರವಾಸೋದ್ಯಮ ಇಲಾಖೆಯ ವತಿಯಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅತಿಥ್ಯ ಕ್ಷೇತ್ರದ ಸಂಸ್ಥೆಗಳಾದ Food Craft Institute (FCI), Mysore e Institute of Hotel Management (IHM) ರವರ ಮೂಲಕ ವಸತಿ ಸಹಿತ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ಕಾರ್ಯಕ್ರಮದ ವಿವರ: Food&Beveragee Service Steward, Multi Cuisine Cook, Room Attendant, Front Office Associate ತರಬೇತಿಗಳನ್ನು ಪಡೆಯಲು ಮೇ.22 ರವರೆಗೆ ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಯ ಕಚೇರಿಯಲ್ಲಿ ಅರ್ಜಿಗಳನ್ನು ಉಚಿತವಾಗಿ ವಿತರಿಸಲಾಗುವುದು.

ಸದರಿ ತರಬೇತಿ ಪಡೆಯಲು ಆಸಕ್ತಿ ಇರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿಗಳನ್ನು ಮೇ.22 ರಂದು ಸಂಜೆ 5.30 ರೊಳಗೆ ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ರವರ ಕಚೇರಿಗೆ ಸಲ್ಲಿಸಬಹುದಾಗಿದೆ, ಈ ತರಬೇತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಯಾವುದೇ ವಿಚಾರಣೆ/ ಸ್ಪಷ್ಟೀಕರಣ ಕುರಿತು ಉಪ ನಿರ್ದೇಶಕರನ್ನು ಕಚೇರಿ ಹಾಗೂ ದೂರವಾಣಿ ಸಂಖ್ಯೆ 08172-268862 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248